**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 21-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 1858/2011

CW-23 PW-13

ಸಾಕ್ಷಿದಾರರ ಹೆಸರು - ಮುತ್ತಣ್ಣಾ ಪಿ ಸರವಗೋಳ

ವಯಸ್ಸು - 48 ವರ್ಷ

ಉದ್ಯೋಗ - ಡಿ ವೈ ಎಸ್ ಪಿ

ಸಾಕೀನ - ಕೊಪ್ಪಳ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2008 ರಿಂದ 2011 ರ ವರೆಗೆ ಗೋಕಾಕ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 08-06-2011 ರಂದು ಚಾಸಾ 22 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆ ಮುಂದುವರೆಸಿ, ಘಟನಾ ಸ್ಥಳಕ್ಕೆ ಭೇಟಿ ನೀಡಿ ಶ್ವಾನದಳ ಪಂಚನಾಮೆಯನ್ನು ಮತ್ತು ಸ್ಥಳ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 9-00 ರಿಂದ 10-15 ಗಂಟೆ ಮತ್ತು 11-00 ರಿಂದ 12-00 ಗಂಟೆಯವರೆಗೆ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಎರಡು ಕೀಲಿ ಕೈಗಳನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ನಂತರ ಚಾಸಾ 1, 6 ರಿಂದ 16

ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಚಾಸಾ 21 ಮತ್ತು 22 ರವರಿಗೆ ಆರೋಪಿಗಳನ್ನು ಪತ್ತೆ ಹಚ್ಚಲು ಆದೇಶಿಸಿರುತ್ತೇನೆ. ದಿಃ 12-06-2011 ರಂದು ಚಾಸಾ 22 ರವರು 2 ರಿಂದ 4 ನೇ ಆರೋಪಿಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಆರೋಪಿಗಳ ಸ್ವ-ಖುಷಿ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. 1 ನೇ ಆರೋಪಿಯ ಸ್ವ-ಖುಷಿ ಹೇಳಿಕೆಯ ಆಧಾರದ ಮೇಲೆ ಅವರು ತೋರಿಸಿದ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಒಂದು ಬೆಳ್ಳಿಯ ಉತ್ಸವ ಮೂರ್ತಿ, ಎರಡು ರೋಡಗೋಲ್ಡ ನೆಕಲೆಸ್‌ಗಳನ್ನು ಮತ್ತು ಒಂದು ಮೋಟಾರ ಸೈಕಲ್‌ನ್ನು ಅಮಾನತ್ತುಪಡಿಸಿಕೊಂಡು ಚಾಸಾ 4 ಮತ್ತು 5 ರವರ ಸಮಕ್ಷಮ ಜಪ್ತ ಪಂಚನಾವೆಯನ್ನು 4-30 ರಿಂದ 7-30 ರ ವರೆಗೆ ಜರುಗಿಸಿರುತ್ತೇನೆ. ನಂತರ ಚಾಸಾ 1, 6 ರಿಂದ 10 ರವರ ಮರು ಹೇಳಿಕೆಗಳನ್ನು ಪಡೆದು, ಜಪ್ತು ಮಾಡಿದ ಮುದ್ದೆಮಾಲುಗಳನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ಇನ್ನೂಳಿದ ಆರೋಪಿಗಳ ತಪಾಸಣೆಗಾಗಿ ಚಾಸಾ 22 ರವರಿಗೆ ಆದೇಶಿಸಿರುತ್ತೇನೆ.

ದಿಃ 13-06-2011 ರಂದು 1 ರಿಂದ 4 ನೇ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಪ್ರರಕಣದ ತನಿಖೆಯನ್ನು ಚಾಸಾ 24 ರವರಿಗೆ ಹಸ್ತಾಂತರಿಸಿರುತ್ತೇನೆ.

3) ಸಾಕ್ಷಿ ನಿಪಿ-3 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು, ಸಾಕ್ಷಿ ನಿಪಿ-4 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು, ಸಾಕ್ಷಿ ನಿಪಿ-6 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ

ಸಹಿಯನ್ನು ನಿಪಿ-6(ಬಿ) ಎಂದು, ಸಾಕ್ಷಿ ನಿಪಿ-19 ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ,ಸಾಕ್ಷಿ ನಿಪಿ-21 ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು , ಸಾಕ್ಷಿ ಕಚ್ಚಾ ನಕಾಶೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-22 ಎಂದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು, ಸಾಕ್ಷಿ 5 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-23 ರಿಂದ ನಿಪಿ-27 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಎರಡು ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ 1 ಮತ್ತು 2 ರ ಪರ ವಕೀಲರಿಂದಃ (ವಿ ಸಿ ಮುಖಾಂತರ)**

1) ನನಗೆ ಘಟನೆ ಆಗಿದ್ದ ಬಗ್ಗೆ ದಿಃ 08-06-2011 ರಂದು ಗಮನಕ್ಕೆ ಬಂದಿರುತ್ತದೆ. ಆರೋಪಿಗಳ ಬಗ್ಗೆ ಅವರ ವಾಸದ ಸ್ಥಳದ ಬಗ್ಗೆ ಮಾತ್ರ ವಿಚಾರಿಸಿದ್ದು, ಬೇರೆ ವಿಷಯದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಆರೋಪಿಗಳ ಕುಟುಂಬದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಆರೋಪಿಗಳನ್ನು ಪತ್ತೆ ಹಚ್ಚಿದ ನಂತರ ಅವರ ಗುರುತಿನ ಚೀಟಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆರೋಪಿಗಳ ವೃತ್ತಿಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಆರೋಪಿಗಳ ಪ್ರಸ್ತುತ ಪ್ರಕರಣ ಹೊರತು ಪಡಿಸಿ ಬೇರೆ ಪ್ರಕರಣದಲ್ಲಿ ಭಾಗಿಯಾಗಿದ್ದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಆದರೆ ಅವರು ಬೇರೆ ಪ್ರಕರಣದಲ್ಲಿ ಭಾಗಿಯಾಗಿದ್ದ ಬಗ್ಗೆ ಮಾಹಿತಿ ಸಿಕ್ಕಿರುವುದಿಲ್ಲ. ಆರೋಪಿಗಳು ಬಡವರಾಗಿದ್ದು

ಯಾವುದೇ ಅಪರಾಧ ಮಾಡಿಲ್ಲದಿದ್ದರೂ, ಬೇರೆಯವರು ಮಾಡಿರುವ ಆರೋಪವನ್ನು ಆರೋಪಿಗಳ ಮೇಲೆ ಹೊರೆಸಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ Finger print ತಜ್ಞರು ಬಂದಿದ್ದು ಅವರ ಹೆಸರು ನನಗೆ ನೆನಪಿಲ್ಲ. ಸದರಿ ತಜ್ಞರು ಬೆಳಿಗ್ಗೆ 9–00 ಗಂಟೆಯಿಂದ 11–00 ಗಂಟೆಯವರೆಗೆ ಪರಿಶೀಲನೆ ಮಾಡಿರುತ್ತಾರೆ. ನನ್ನ ಮುಂದಿನ ತನಿಖಾಧಿಕಾರಿ ಸದರಿ ತಜ್ಞರಿಂದ ವರದಿ ಪಡೆದಿರಬಹುದು. ನಾನು ವರದಿ ಮಾಡಿರುವ ಬೆರಳು ಗುರುತುಗಳಿಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ–22 ನ್ನು ಠಾಣಾ ಬರಹಗಾರರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ಪಡೆದಿರುವುದಿಲ್ಲ. ನಿಪಿ–3 ನ್ನು ತಯಾರಿಸಿದ ಸಮಯದಲ್ಲಿ ಸ್ಥಳೀಯರ ಹೇಳಿಕೆಗಳನ್ನು ಪಡೆದರುತ್ತೇನೆ. ನಾನು ಸದರಿ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ–22 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ–23 ರಿಂದ 27 ಗಳನ್ನು ತೆಗೆದ ಛಾಯಾಗ್ರಾಹಕರ ಹೆಸರು ನನಗೆ ನೆನಪಿಲ್ಲ ಮತ್ತು ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ. ಸದರಿ ದಾಖಲೆಗಳ ಸಿ.ಡಿ.ಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳಿಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ಗಳು Freedom 8 liver ಮತ್ತು HAN–YI ಕಂಪನಿಗಳದ್ದಾಗಿರುತ್ತವೆ. ಅವುಗಳು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ಗಳಿಗೂ ಆರೋಪಿಗಳಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಾಸಾ 6 ರಿಂದ 16 ರವರ ಹೇಳಿಕೆಗಳನ್ನು ದಿಃ 08–06–2011 ರಂದು ಪಡೆದಿರುತ್ತೇನೆ. ಆಗ ಸಮಯ

01–00 ಗಂಟೆ ಆಗಿತ್ತು. ಅವರ ಮರುಹೇಳಿಕೆಗಳನ್ನು ದಿಃ 12–06–2011 ರಂದು ಪಡೆದಿರುತ್ತೇನೆ. ಆರೋಪಿಗಳನ್ನು ಮತ್ತು ಮುದ್ದೆಮಾಲುಗಳನ್ನು ಗುರುತಿಸುವ ಸಲುವಾಗಿ ಮರುಹೇಳಿಕೆ ಪಡೆದಿರುತ್ತೇನೆ. ಸದರಿ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ಪಡೆಯದೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಸ್ವಖುಷಿ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಅಪರಾಧ ಮಾಡಿರದಿದ್ದರೂ,ಅವರ ವಿರುದ್ಧ ಸುಳ್ಳು ತನಿಖೆ ಕೈಗೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ 4 ರ ಪರ ವಕೀಲರಿಂದಃ (ವಿ ಸಿ ಮುಖಾಂತರ)**

ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.